

ಸಂಪಾದಕೀಯ

# ಜೀವನದ ಎರಡು ಗತಿಗಳು



ಪ್ರಪಂಚ ನಿರಂತರ ಬದಲಾಗುತ್ತಿದೆ. ಈ ಬದಲಾವಣೆಯಲ್ಲಿ ಎರಡು ಗತಿಗಳನ್ನು ನಾವು ಗಮನಿಸಬಹುದು: ಒಂದು, ಸದಾ ಹೊಸತನ್ನು ಕಾಣುವ, ಹೊಸ ಹೊಸ ಆಶಯ- ಆವಿಷ್ಕಾರ -ಆಧುನಿಕತೆಯತ್ತ ಸಾಗುವ ಪ್ರವೃತ್ತಿ. ಇನ್ನೊಂದು, ಎಲ್ಲ ಬದಲಾವಣೆಗಳ ನಡುವೆ ಸ್ಥಿರವಾದ, ಬದಲಾಗದ, ಶಾಶ್ವತ ಸಂಗತಿಗಳತ್ತ ಮರಳುವ, ಅದನ್ನೇ ಬಲವಾಗಿ ಹಿಡಿದುಕೊಳ್ಳುವ ಪ್ರವೃತ್ತಿ. ವಿಜ್ಞಾನ, ರಾಜಕೀಯ, ಧರ್ಮ, ಸಾಮಾಜಿಕ ಜನಜೀವನ — ಎಲ್ಲ ಕ್ಷೇತ್ರಗಳಲ್ಲೂ ಈ ಪ್ರವೃತ್ತಿಗಳನ್ನು ಕಾಣುತ್ತೇವೆ. ವ್ಯಕ್ತಿ-ವ್ಯಕ್ತಿಗಳ ಧೋರಣೆಗೆ, ಸ್ವಭಾವಕ್ಕೆ ಅನುಗುಣವಾಗಿ, ಒಂದೋ ಆಧುನಿಕತೆ – ಹೊಸತನವನ್ನು ಮಾತ್ರ ಒಪ್ಪುವ, ಅದನ್ನೇ ಜೀವನಧರ್ಮವಾಗಿಸುವ ಪ್ರವೃತ್ತಿ ಕೆಲವರದು. ಅವರು ಹಳೆಯ ಪದ್ಧತಿ, ನಂಬಿಕೆ, ಸಂಪ್ರದಾಯಗಳನ್ನು ಒಪ್ಪುವುದೇ ಇಲ್ಲ. 'ಹಳೆಯದರಲ್ಲಿ ಕೆಲವು ಒಳ್ಳೆಯದು ಇದ್ದರೂ ಇರಬಹುದು. ಆದರೆ ಈಗ ಅದು ನಗಣ್ಯ' ಎಂಬುದು ಅಂಥವರ ಅಭಿಪ್ರಾಯ. ಇದಕ್ಕೆ ವಿರುದ್ಧವಾದುದು ಇನ್ನೊಂದು ಬಗೆಯ ವ್ಯಕ್ತಿಗಳ ಪ್ರವೃತ್ತಿ. ಆಧುನಿಕರಾಗೋಣ, ಹೊಸತನ್ನು ಒಪ್ಪಿಕೊಳ್ಳೋಣ; ಆದರೆ ನಮ್ಮ ಹಳೆಯ ಜೀವನ ಪದ್ಧತಿಯಲ್ಲಿ ಅನೇಕ ಅಮೂಲ್ಯ ರತ್ನಗಳಿವೆ. ಅವುಗಳನ್ನು ತ್ಯಜಿಸುವುದರಿಂದ ನಾವು ಹಲವಾರು ಸಂಗತಿಗಳನ್ನು ಕಳೆದುಕೊಳ್ಳುತ್ತೇವೆ. ಕಾರಣ, ಈ ಅಮೂಲ್ಯ ಸಂಗತಿಗಳು ಯಾವ ಕಾಲಕ್ಕೂ ಬದಲಾಗದ ಸತ್ಯಗಳಾಗಿವೆ. ಅದನ್ನು ನಾವು ತಿರಸ್ಕರಿಸಬಾರದು. ಈ ಎರಡೂ ಅಭಿಪ್ರಾಯಗಳನ್ನು ಹೊಂದಿದವರಲ್ಲಿ ತೀವ್ರಗತಿಯವರಿದ್ದಾರೆ; ಅಂತೆಯೇ ಮಂದಗತಿಯವರಿದ್ದಾರೆ. ಎಲ್ಲೋ ಕೆಲವರು ಎರಡನ್ನೂ ಸಮತ್ವದಲ್ಲಿ ಇರಿಸಿಕೊಂಡವರಿದ್ದಾರೆ. ಉತ್ತಮ ಜೀವನ ನಡೆಸಲು ಇದರಲ್ಲಿ ಯಾವ ಪ್ರವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು? ಇವೆರಡೂ ಪ್ರವೃತ್ತಿಗಳ ಲೋಪದೋಷಗಳೇನು? ಇವೆರಡೂ ಅನಿವಾರ್ಯವಾದ ಆಯ್ಕೆಗಳೆ? ಎರಡರ ಸಮನ್ವಯ ಮಾಡಿಕೊಳ್ಳಬಹುದೆ? — ಎಲ್ಲರೂ ಜೀವನದಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನು ಒಂದಲ್ಲ ಒಂದು ಹಂತದಲ್ಲಿ ಕಂಡುಕೊಳ್ಳಲೇಬೇಕಾಗುವುದು.

## 'ನಮೋ ನಮೋ ಭವತಿ'

ಪ್ರಪಂಚದಲ್ಲಾಗುವ ಬದಲಾವಣೆಯಿಂದಾಗಿ ದಿನದಿನವೂ ಹೊಸ ಬೆಳಗನ್ನು ಕಾಣುವಂತೆ, ಜೀವನದಲ್ಲೂ ಹೊಸ ಹೊಸ ಕ್ಷಣಗಳನ್ನು ಸ್ವಾಗತಿಸುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ಸಹಸ್ರಾರು ವರ್ಷಗಳ ಹಿಂದಿನ ವೈದಿಕ ಸಾಹಿತ್ಯದಲ್ಲೇ ಬದುಕಿನಲ್ಲಿ ಹೊಸತನ್ನು ಕಾಣುವ, ಹೊಸತಿಗೆ ಜೀವನದ ಗತಿಯನ್ನೊಡ್ಡುವ ಪ್ರವೃತ್ತಿಯಿದೆ. ಹಾಗಿದ್ದುದರಿಂದಲೇ ಅವರು ಬಾಹ್ಯದಲ್ಲಿ ಹಾಗೂ ಆಂತರ್ಯದಲ್ಲಿ ಹೊಸ ಬೆಳಕನ್ನು ಕಂಡರು. ಅನ್ವೇಷಣ ಪ್ರವೃತ್ತಿ ಮಾನವನ ಹುಟ್ಟುಗುಣ. ಆದಿಮ ಜನಾಂಗಗಳು ಗುಡ್ಡ, ಕಾಡು, ಗುಹೆಗಳಲ್ಲಿ ಸುರಕ್ಷಿತ ತಾಣವನ್ನು ಕಂಡುಕೊಂಡು ಬದುಕುತ್ತಿದ್ದರೂ, ಬೇಟೆಗಾಗಿ ಹೊರಗಡೆ ಅಲೆದಾಡುತ್ತಿದ್ದರು. ಸಹಜವಾಗಿಯೇ ಅವರಿಗೆ ಹೊಸ ಹೊಸ ಭೂಪ್ರದೇಶ, ಪ್ರಾಣಿಪಕ್ಷಿ-ಜಲಚರಗಳ ಪರಿಚಯವಾಗುತ್ತಿತ್ತು. ಅನುಭವವೂ ಹೊಸದಾಗುತ್ತಿತ್ತು. ಕ್ರಮೇಣ ಸಂತತಿ ಹೆಚ್ಚಿತು; ಒಂದು ನೆಲೆ ಸಾಲದಾಯಿತು. ಆಗ ಬದುಕುವ ತಾಣಗಳನ್ನು ಹೊಸದಾಗಿ ಕಂಡುಕೊಳ್ಳಲು ವಲಸೆ ಹೋಗುವುದು ಅನಿವಾರ್ಯವಾಯಿತು. ಒಂದೊಂದು ಮಾನವ ಗುಂಪು ಹೊಸ ಹೊಸ ಪ್ರದೇಶಗಳನ್ನರಸಿ ಹೋದಂತೆಲ್ಲ ಅವನ ಪ್ರಾಕೃತಿಕ ಅರಿವು, ಅನುಭವದ ವಿಸ್ತಾರ ಹೆಚ್ಚಾಯಿತು. ಇವೆಲ್ಲ ಒಂದು ಬಗೆಯಲ್ಲಿ ಚಾರಿತ್ರಿಕ ಘಟನೆಗಳೇ. ಆದರೆ ಅದಾವುದೂ ದಾಖಲಾಗಿಲ್ಲ. ಕೇವಲ ಮೆಗೆಲನ್, ಕೊಲಂಬಸ್ ಮುಂತಾದವರ ಸಮುದ್ರಯಾನಗಳು ದಾಖಲಾಗಿವೆ, ಆದ್ದರಿಂದ ಅವರು ಚಾರಿತ್ರಿಕ ಅನ್ವೇಷಕರಾದರು. ಅದಕ್ಕೂ ಹಿಂದೆ ಭೂಯಾನ, ಸಮುದ್ರಯಾನಗಳು ಹೇರಳವಾಗಿ ನಡೆದಿವೆ. ಎಷ್ಟೆಷ್ಟೋ ಸಾಹಸಗಳು ಇತಿಹಾಸದ ಗರ್ಭದಲ್ಲಿ ಮರೆಯಾಗಿವೆ. ಕೇವಲ ದಾಖಲಾಗಿರುವ ಆಧುನಿಕ ಅನ್ವೇಷಕರಷ್ಟೇ ಚರಿತ್ರೆಯ ಪುಟಗಳಲ್ಲಿ ಮೆರೆದಾಡುತ್ತಿದ್ದಾರೆ.

ಆದರೆ 'ಹೊಸತಾಗುವ' ಈ ಪ್ರವೃತ್ತಿಗೆ ಒಂದು ಚಾಲನೆ ದೊರಕಿದುದು ಯೂರೋಪ್‌ನಲ್ಲಿ ಎಂಬುದು ನಿರ್ವಿವಾದ. ವಿಜ್ಞಾನದ ಬೆಳವಣಿಗೆಗೆ ಕಾರಣವಾದ ನವೋತ್ಥಾನ, ಪುನರುತ್ಥಾನಗಳು ಹಲವರಲ್ಲಿ ಪ್ರಶ್ನಿಸುವ ಮನೋಭಾವವನ್ನು ಹುಟ್ಟುಹಾಕಿತು. ಧರ್ಮ, ಚರ್ಚ್ ಸತ್ಯವೆಂದೇ ಹೇಳಿ ಎಲ್ಲರ ಬಾಯಿ ಮುಚ್ಚಿಸುತ್ತಿದ್ದ ಸಂಗತಿಗಳನ್ನು ಹಲವು ಮಂದಿ ಚಿಂತಕರು ಪ್ರಶ್ನಿಸಿದರು; ಅದರ ಫಲವಾಗಿ ಎಷ್ಟೋ ಮಂದಿ ಶಿಕ್ಷೆಗೊಳಗಾದರು, ಅನೇಕ ಮಂದಿ ವಧಿಸಲ್ಪಟ್ಟರು. ಆದರೆ ಸತ್ಯಾನ್ವೇಷಕರನ್ನು ಯಾರು ತಡೆಯಬಲ್ಲರು? ವಿಚಾರವಾದದ ಮುಂದೆ ಬಲವಂತದ ಸಂಪ್ರದಾಯ, ಧಾರ್ಮಿಕ ನಂಬಿಕೆಗಳು ನಿಲ್ಲಲಿಲ್ಲ. ಕಂದಾಚಾರ, ಮೂಢನಂಬಿಕೆಗಳನ್ನು ತಿರಸ್ಕರಿಸುವ ಭರದಲ್ಲಿ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ನೈತಿಕ ತತ್ತ್ವಗಳನ್ನು ತಳ್ಳಿಹಾಕುವ ಪ್ರವೃತ್ತಿ ಎಲ್ಲೆಡೆ ಕಂಡುಬಂತು. ವಿಜ್ಞಾನ ಬೆಳೆಯಿತು; ಜಗತ್ತು ಬದಲಾಯಿತು. ಆದರೆ ಯೂರೋಪ್ ನಲ್ಲಿ ಉಂಟಾದ ವೈಜ್ಞಾನಿಕ, ವೈಚಾರಿಕ ಬೆಳವಣಿ

ಗೆಗೆ ಪ್ರಪಂಚದಾದ್ಯಂತ ಮನ್ನಣೆ ದೊರಕಿತು. ಈ ಹಿನ್ನೆಲೆಯಲ್ಲಿ ಬೆಳೆದು ಬಂದ 'ಆಧುನಿಕರಾಗುವ' ಪ್ರವೃತ್ತಿ ಎಲ್ಲರಿಗೂ ಅತ್ಯಂತ ಸಹಜವಾದ, ಆರೋಗ್ಯಕರವಾದ ಹಾಗೂ ಆಪ್ಯಾಯಮಾನವಾದ ಬದಲಾವಣೆಯೆನ್ನಿಸಿತು. ಇದರಿಂದ ಪ್ರಾಚೀನ ನಾಗರಿಕತೆಗಳ ಮೂಲಕ ಸಾಗಿಬಂದ ಮಾನವ ಸಂಸ್ಕೃತಿ, ಪರಂಪರೆಗಳ ಅನೇಕ ಜ್ಞಾನಸಂಪತ್ತುಗಳನ್ನು ಕಳೆದುಕೊಳ್ಳುವ ಭಯ ಯಾರಿಗೂ ಕಾಣಲಿಲ್ಲ. ಆದರೆ ಇತ್ತೀಚೆಗೆ ಆಧುನಿಕತೆಯ, ವಿಜ್ಞಾನ-ತಂತ್ರಜ್ಞಾನಗಳ ಪ್ರಭಾವವು ತನ್ನ ಮಿತಿಯನ್ನು ಮೀರಿ ಬದುಕನ್ನು ಆವರಿಸತೊಡಗಿದೆ; ನಗರಜೀವನ, ಆಧುನಿಕತೆಯ ಹುಚ್ಚು ಮನೆ, ಮನಗಳನ್ನು, ವ್ಯಕ್ತಿ-ವ್ಯಕ್ತಿಗಳನ್ನು ಪ್ರಭಾವಿಸಿದೆ. ಹಾನಿಕರವೆಂಬ ರೀತಿಯಲ್ಲಿ ಅವು ಜನಜೀವನವನ್ನು ಬದಲಾಯಿಸುತ್ತಿವೆ. ಈ ಸಂದರ್ಭದಲ್ಲಿ 'ನಾವು ಕಳೆದುಕೊಳ್ಳುತ್ತಿರುವುದೇನನ್ನು ?' ಎಂದು ಪ್ರತಿಯೊಬ್ಬರೂ ಪ್ರಶ್ನಿಸಿಕೊಳ್ಳಬೇಕಾದ ಸಂದರ್ಭ ಎದುರಾಗಿದೆ.

### 'ಅಜೋ ನಿತ್ಯಃ ಶಾಶ್ವತೋಯಂ ಪುರಾಣೋ'

ಅತ್ಯಂತ ಆಶ್ಚರ್ಯಕರವೆಂಬಂತೆ, ಯೂರೋಪ್‌ನಲ್ಲಾದ ಬದಲಾವಣೆ ಹಾಗೂ ಆಧುನಿಕತೆ ಪ್ರಪಂಚದೆಲ್ಲೆಡೆ ಬಿರುಗಾಳಿಯಂತೆ ಬೀಸಿದರೂ ಭಾರತದಲ್ಲಿ ಅಷ್ಟು ಪ್ರಚಂಡವಾದ ಬದಲಾವಣೆಯನ್ನು ಉಂಟುಮಾಡಲೇ ಇಲ್ಲ. ಬ್ರಿಟಿಷ್ ಆಡಳಿತದ ಕಾಲದಲ್ಲಿ ವ್ಯಾಪಕಗೊಂಡ ಇಂಗ್ಲಿಷ್ ವಿದ್ಯಾಭ್ಯಾಸದ ಮತ್ತು ಆಧುನಿಕ ರೀತಿಯ ಸಾರ್ವಜನಿಕ ಶಿಕ್ಷಣದ ಕಾರಣದಿಂದ ನಮ್ಮಲ್ಲಿ ವಿಜ್ಞಾನದ ಅರಿವು ವ್ಯಾಪಕಗೊಂಡಿತು, ನಿಜ. ವೈಜ್ಞಾನಿಕ ಆವಿಷ್ಕಾರಗಳ ಬಳಕೆಯೂ ಕ್ರಮೇಣ ಉಂಟಾಯಿತು. ಆದರೆ ಅದಕ್ಕೆ ಸಮಾನಾಂತರವಾಗಿ ನಮ್ಮಲ್ಲಿ ರಾಷ್ಟ್ರೀಯ ಭಾವನೆ, ಸ್ವಾತಂತ್ರ್ಯ ಚಳುವಳಿ, ಧಾರ್ಮಿಕ-ಆಧ್ಯಾತ್ಮಿಕ ಪುನರುತ್ಥಾನ ಅತ್ಯಂತ ಶಕ್ತಿ ಪೂರ್ಣವಾಗಿ ನಡೆಯಿತು. ದೈವಸಂಕಲ್ಪವೇ ಹಾಗಿತ್ತೇನೋ! ಪಾಶ್ಚಾತ್ಯ ಜೀವನಕ್ರಮ, ವಿದ್ಯಾಭ್ಯಾಸಗಳ ಪ್ರಭಾವ ನಮ್ಮ ದೇಶದ ತಾಯಿಬೇರಾದ ಸಂಸ್ಕೃತಿ-ಆಧ್ಯಾತ್ಮಿಕತೆಗಳನ್ನೇ ಅಲುಗಾಡಿಸಿ, ಬುಡಮೇಲಾಗಿ ಮಾಡುವುದೇನೋ ಎಂಬ ಸನ್ನಿವೇಶ ಎದುರಾದಾಗಲೇ ನಮ್ಮಲ್ಲಿ ಆಧ್ಯಾತ್ಮಿಕ ಧ್ರುವತಾರೆಗಳಾದ ಶ್ರೀರಾಮಕೃಷ್ಣರ, ವಿವೇಕಾನಂದರ ಅರವಿಂದ-ರಮಣರ ಅವತಾರವಾಯಿತು.

ಪಾಶ್ಚಾತ್ಯರ ಹೊಸ ಅನ್ವೇಷಣೆ-ಆವಿಷ್ಕಾರ-ವಿಜ್ಞಾನಗಳು ಏನು ಬೇಕಾದರೂ ಹೇಳಲಿ; ನಮ್ಮ ಸನಾತನ ಸಂಸ್ಕೃತಿ ಸಾರುವ ಶಾಶ್ವತ ಸತ್ಯಗಳು ಎಲ್ಲ ಕಾಲಕ್ಕೂ ಅಚಲವಾಗಿ ನಿಲ್ಲುತ್ತವೆ ಎಂಬುದನ್ನು ಭಾರತೀಯರು ನಂಬುವಂತಾಯಿತು. ಸಹಸ್ರಾರು ವರ್ಷಗಳಿಂದ ಹರಿದು ಬಂದ ಇಲ್ಲಿನ ಆಧ್ಯಾತ್ಮಿಕ ಭಾವನೆಗಳು ಸುಳ್ಳು ಪೊಳ್ಳು, ಕಂತೆಬೊಂತೆಗಳಲ್ಲ; ಅವುಗಳು ಸಹಸ್ರಾರು ಮಂದಿ ಋಷಿ, ಮುನಿಗಳ, ಸಾಧು-ಸಂತರ, ಅವತಾರಪುರುಷರ ನೇರ ಅನುಭವಗಳು ಎಂದು ಆಧುನಿಕ ಧಾರ್ಮಿಕ ಮಹಾತ್ಮರು ಜಗತ್ತಿಗೆ ತೋರಿಸಿಕೊಟ್ಟರು. ಈ ಹೊಸ ಚಳುವಳಿ ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ, ಇಡೀ ಪ್ರಪಂಚವನ್ನೇ ಅಲುಗಾಡಿಸಿದ ಪಾಶ್ಚಾತ್ಯರ ವೈಜ್ಞಾನಿಕ ಚಿಂತನೆ ಭಾರತದ ಆಂತರ್ಯವಾದ ಧರ್ಮವನ್ನು ಎದುರಿಸಲಾಗಲಿಲ್ಲ; ಬದಲಾಗಿ ವೈಜ್ಞಾನಿಕ ದೃಷ್ಟಿಕೋನದಿಂದಲೇ ಇಲ್ಲಿನ ಧರ್ಮ, ಸಂಸ್ಕೃತಿ, ಅಧ್ಯಾತ್ಮಗಳನ್ನು ಹೊಸದಾಗಿ ವಿಶ್ಲೇಷಿಸಿ, ಮರುಸ್ಥಾಪನೆ ಮಾಡುವಂತಾಯಿತು. ಸ್ವಾಮಿ ವಿವೇಕಾನಂದರ, ಶ್ರೀಅರವಿಂದರ, ದಯಾನಂದ ಸರಸ್ವತಿಗಳ, ವಿಜ್ಞಾನಿ ಜಗದೀಶಚಂದ್ರ ಬೋಸರ ಚಿಂತನೆಗಳಲ್ಲಿ ಈ ಬಗೆಯ ವಿಶ್ಲೇಷಣೆಯನ್ನು ನಾವು ಕಾಣಬಹುದು. ನಮ್ಮಲ್ಲೂ ಇದ್ದ, ಈಗಲೂ ಇರುವ, ಧರ್ಮ-ಸಂಸ್ಕೃತಿಗಳನ್ನು ಪ್ರಶ್ನಿಸುವ ಆಧುನಿಕರಿಗೆ ಇವರ ಚಿಂತನೆಗಳು ಸಮರ್ಥವಾದ ಉತ್ತರ ನೀಡಿದವು. 'ಜನನ ಮರಣಗಳಿಲ್ಲದ, ನಿತ್ಯನೂ ಶಾಶ್ವತನೂ ಆದ ಈ ಪ್ರಾಚೀನ ಪುರುಷನೇ ಆತ್ಮವೆನಿಸಿಕೊಳ್ಳುತ್ತಾನೆ; ನಾಶವಾಗಿ ಹೋಗುವ ದೇಹದಲ್ಲಿದ್ದರೂ ಈ ಆತ್ಮನಿಗೆ ಸಾವಿಲ್ಲ' — ಈ ಆತ್ಮತತ್ತ್ವವನ್ನು ವೈಜ್ಞಾನಿಕವಾಗಿ ಪ್ರಸ್ತುತಪಡಿಸುವುದು ಭಾರತದಲ್ಲಿ ಸಾಧ್ಯವಾಯಿತು. ಆಧ್ಯಾತ್ಮಿಕತೆ, ತರ್ಕಶಾಸ್ತ್ರ, ತತ್ತ್ವಶಾಸ್ತ್ರ ಇವು ಇಲ್ಲಿ ಒಂದಕ್ಕೊಂದು ಪೂರಕವಾಗಿ ಬಂದವು; ಅನೇಕ ಬಾರಿ ಇವು ಒಂದಾಗಿಯೇ ಪರಿವರ್ತನೆ ಹೊಂದಿದವು. ಆದ್ದರಿಂದಲೇ ಈ ಬಗೆಯ ವೈಜ್ಞಾನಿಕ ವಿವರಣೆ ನಮ್ಮಲ್ಲಿ ಸಾಧ್ಯವಾಯಿತು. ಎಲ್ಲದಕ್ಕೂ ಮೂಲವೆಂಬಂತೆ, ಆಧ್ಯಾತ್ಮಿಕ ಅನುಭವಗಳ ಗಟ್ಟಿತನ ಭಾರತವನ್ನು ಕಾಪಾಡಿತು.

### ಸದ್ಯದ ಗೊಂದಲ

ಸ್ವತಂತ್ರ ಭಾರತದಲ್ಲಿ ಎರಡೂ ಗತಿಯ ಬದಲಾವಣೆಗಳು ಮುಂದುವರಿದುಕೊಂಡು ಬಂದಿವೆ. ವೈಜ್ಞಾನಿಕ ಆವಿಷ್ಕಾರಗಳೊಂದಿಗೆ ತಂತ್ರಜ್ಞಾನ, ವಾಣಿಜ್ಯ-ವ್ಯವಹಾರ, ಆಧುನಿಕ ವಿದ್ಯಾಭ್ಯಾಸ, ಬೃಹತ್‌ನಗರಗಳ ನಿರ್ಮಾಣ ಇವೆಲ್ಲ 'ಆಧುನಿಕ ಭಾರತ' ವೆಂಬ ಕಲ್ಪನೆಯನ್ನು ಹುಟ್ಟುಹಾಕಿವೆ. ಇವೆಲ್ಲ 'ಮುಂದೆ' ನೋಡುತ್ತವೆ, ಆದಷ್ಟೂ ಹೊಸತನ್ನು ಬರಮಾಡಿಕೊಳ್ಳುತ್ತಿವೆ. ಅಷ್ಟೇ ಪ್ರಮಾಣದಲ್ಲಿ, ಅದಕ್ಕೆ ಸಮಾನಾಂತರವಾಗಿ ನಮ್ಮ ಸಂಸ್ಕೃತಿ, ನಮ್ಮ ಪರಂಪರೆ, ನಮ್ಮ ಧರ್ಮ-ನಮ್ಮ ಆಧ್ಯಾತ್ಮ ಇವನ್ನು ಉಳಿಸಿ ಬೆಳೆಸಿಕೊಳ್ಳಬೇಕೆಂಬ ಅರಿವು ಹೊಸ ಹೊಸ ರೂಪಗಳನ್ನು ಪಡೆಯುತ್ತಾ ಬಂದಿದೆ. ಅನೇಕ ಬಾರಿ ಈ ಪ್ರವೃತ್ತಿಗಳ ನಡುವೆ ಸಂಘರ್ಷಗಳಾಗಿವೆ; ಈಗಲೂ ಆಗುತ್ತಿವೆ. ಇಲ್ಲಿ ಸೋಲು-ಗೆಲುವಿನ ಪ್ರಶ್ನೆಯಿಲ್ಲ. ಸಮಬಲದ ಹೋರಾಟ ನಡೆಯುವಾಗ ಹೋರಾಡುವುದೊಂದೇ ಅತ್ಯಂತ ಕುತೂಹಲಕರವಾಗಿರುತ್ತದೆ; ಯಾರು ಗೆಲ್ಲುವರು, ಯಾರು ಸೋಲುವರು ಎಂಬುದಲ್ಲ. ಬಹುಶಃ ಭಾರತದ ಸ್ಥಿತಿಗತಿ ಹೀಗೆಯೇ ಮುಂದುವರಿಯುವುದು. ಇಲ್ಲಿ ಪರಂಪರೆ, ಧರ್ಮ-ಸಂಸ್ಕೃತಿಗಳ ಗಟ್ಟಿತನ ಎಂತಹುದೆಂದರೆ, ಅಚಲ ಹಿಮಾಲಯದಂತೆ. ವೈಜ್ಞಾನಿಕತೆ, ಆಧುನಿಕತೆ ಒಂದಲ್ಲ ಒಂದು ರೀತಿ ಅದನ್ನು ಪುಷ್ಟಿಗೊಳಿಸುವುದು. ಕಾರಣ, ಎಲ್ಲವನ್ನೂ ತನ್ನೊಳಗೆ ಜೀರ್ಣಿಸಿಕೊಳ್ಳುವ ಸಾಮರ್ಥ್ಯವನ್ನು ಇಲ್ಲಿನ ಪರಂಪರೆ ಹೊಂದಿದೆ.

ಆದರೆ ತೀರ ಇತ್ತೀಚೆಗೆ ನಮ್ಮಲ್ಲಿ ಕಂಡುಬರುತ್ತಿರುವ ಗೊಂದಲ ಹಲವರ ನಿದ್ದೆಗೆಡಿಸಿದೆ: ವಿಶೇಷವಾಗಿ, ಹೊಸ ತಲೆಮಾರಿನ ಯುವಜನತೆ ದಾರಿ ತಪ್ಪುತ್ತಿದೆ; ಯುವಕಯುವತಿಯರು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿದ್ದಾರೆ, ವಿಶೇಷವಾಗಿ ಅಮೆರಿಕದ ಜೀವನ ಕ್ರಮವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ನಮ್ಮ ಪರಂಪರೆ,

ಜೀವನಶೈಲಿ, ಸಂಸ್ಕೃತಿಗಳತ್ತ ಅವರಿಗೆ ಆಸಕ್ತಿಯಿಲ್ಲ; ಅತ್ತ ತಿರುಗಿಯೂ ನೋಡುತ್ತಿಲ್ಲ. ಟಿ.ವಿ, ಮೊಬೈಲ್, ಇಂಟರ್ನೆಟ್ ಮುಂತಾದ ಮಾಧ್ಯಮಗಳು ಬಿತ್ತರಿಸುವ ಹಲವು ಸಂಗತಿಗಳು ನಮ್ಮ ಸಾಂಸ್ಕೃತಿಕ-ಕುಟುಂಬಿಕ ಜೀವನಕ್ಕೆ ಮಾರಕವಾಗಿವೆ. ಇವುಗಳನ್ನು ಯಾವ ರೀತಿಯಿಂದಲೂ ತಡೆಯಲಾಗುತ್ತಿಲ್ಲ. ಇವುಗಳ ಪೀಡೆಗೆ ಒಳಗಾಗಿರುವ ಇನ್ನೊಂದು ವರ್ಗವೆಂದರೆ ಕಲಿಯುವ ಮಕ್ಕಳು. ನಮ್ಮ ಇಡೀ ಜೀವನಶೈಲಿಯೇ ಆಧುನಿಕತೆಯ ನೆಪದಲ್ಲಿ ದಾರಿತಪ್ಪಿ ಹೋಗುತ್ತಿದೆ. ಇಂಥ ಹಾನಿಕರ ಬದಲಾವಣೆಗೆ ಏನು ಪರಿಹಾರ?

ಈ ಬಗೆಯ ಆತಂಕದ ಪ್ರಶ್ನೆಗಳಿಗೆ ನಮ್ಮ ಸಮಾಜವೇ ಉತ್ತರ ಕಂಡುಕೊಳ್ಳುತ್ತದೆ. ಜೀವನಶೈಲಿ ಬದಲಾಗಿದೆ; ಹೊಸ ಆವಿಷ್ಕಾರಗಳಾಗಿವೆ. 'ದಾರಿತಪ್ಪುವ' ಪ್ರವೃತ್ತಿಗೆ ಸರಿಯಾದ ಕಡಿವಾಣ ಹಾಕುವ ಕ್ರಮಗಳನ್ನು ಕೂಡ ರೂಢಿಸಲಾಗುತ್ತಿದೆ. ಮಕ್ಕಳ ವಿದ್ಯಾಭ್ಯಾಸ ಕೆಟ್ಟು ಹೋಗುವುದೆಂದು ಎಷ್ಟೋ ಮನೆಗಳಲ್ಲಿ ಟಿ.ವಿ, ಕಂಪ್ಯೂಟರ್, ಫೋನ್‌ಗಳನ್ನು ಬಳಸುವುದೇ ಇಲ್ಲ. ಆದರೆ ಎಲ್ಲವೂ ಬದಲಾದಾಗ, ಇಡೀ ಜಗತ್ತೇ ಹೊಸ ಹೊಸತನ್ನು ಕಾಣುತ್ತಿರುವಾಗ 'ಟಿ.ವಿ. ನೋಡಬಾರದು, ಫೋನ್ ಬಳಸಬಾರದು, ಇಂಟರ್‌ನೆಟ್ ನೋಡಬಾರದು' ಎಂದು ಎಲ್ಲದರಿಂದ ಮಕ್ಕಳನ್ನು ಮುಚ್ಚಿಡಲು, ಬಚ್ಚಿಡಲು ಸಾಧ್ಯವೆ? ಆದರೆ ಈ ಎಲ್ಲ ಮಾಧ್ಯಮಗಳ ಸರಿಯಾದ ಬಳಕೆಯಾಗುವಂತೆ ಮಕ್ಕಳಿಗೆ ತರಬೇತಿ ನೀಡಬೇಕು. ಅದು ಹೆತ್ತವರ, ಅಧ್ಯಾಪಕರ ಜವಾಬ್ದಾರಿ. ಆದಷ್ಟು 'ಪ್ರೈವಸಿ'ಯನ್ನು ಅಳಿಸಿಹಾಕುವ, ಸಾರ್ವಜನಿಕವಾಗಿ ಮಾಧ್ಯಮಗಳನ್ನು ಬಳಸುವ ಅಭ್ಯಾಸ ಮಾಡಿಸಬೇಕು. ಕುಟುಂಬ ಹಾಗೂ ವಿದ್ಯಾಭ್ಯಾಸ ಇದನ್ನು ಮಾಡುವುದರಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತವೆ.

### ವ್ಯಾಪಾರ, ಶಿಕ್ಷಣ, ನೈತಿಕ ನೆಲೆಗಟ್ಟು

'ಡಾಲರ್ ಎಲ್ಲವನ್ನೂ ಕಬಳಿಸುತ್ತದೆ' ಎನ್ನುತ್ತಾರೆ. ಅಮೆರಿಕದಂಥ ದೇಶದಲ್ಲಿ ವ್ಯಾಪಾರ, ವಾಣಿಜ್ಯ-ವ್ಯವಹಾರ ಹಾಗೂ ಡಾಲರ್ ಎಲ್ಲವನ್ನೂ ನಿರ್ಣಯಿಸುತ್ತದೆ. ಆದರೆ ಭಾರತ? ನಿಧಾನವಾಗಿ ಅದೇ ದಾರಿಯಲ್ಲಿ ಹೆಜ್ಜೆ ಹಾಕುತ್ತಿದೆ ಎನ್ನಬೇಕು. ಉದ್ದಿಮೆ, ವ್ಯವಹಾರಗಳ ಅಭಿವೃದ್ಧಿಯಾದಂತೆ ಬಳಕೆದಾರರನ್ನು ಆಕರ್ಷಿಸುವ ಜಾಹಿರಾತುಗಳು, ಅವುಗಳಲ್ಲಿ ಬಿಂಬಿತವಾಗುವ ಜೀವನಶೈಲಿ ಜನರನ್ನು ಮರುಳುಗೊಳಿಸುವಂತೆ ರೂಪಗೊಳ್ಳುವುವು. ಹಲವರ ಪ್ರಕಾರ, ಯುಜನರ ಚಿತ್ತ ಆಧುನಿಕತೆಯೆಡೆಗೆ ಹೊರಳುವುದು ಇಂತಹ 'ಜಾಹೀರಾತು ಸಂಸ್ಕೃತಿ'ಯಿಂದ. ಅವು ಹೊಸ 'ಟ್ರೆಂಡ್'ಗಳನ್ನು ರಚಿಸುತ್ತವೆ. ಯುವಜನರು ಇವುಗಳಿಗೆ ಮರುಳಾಗದಂತೆ ತಡೆಯಬೇಕಾದವರು ಯಾರು? ಸರಕಾರ, ಸಮಾಜ, ಮತ್ತು ನಮ್ಮ ಶೈಕ್ಷಣಿಕ ಸಂಸ್ಥೆಗಳು. ವಾಣಿಜ್ಯ-ವ್ಯವಹಾರಗಳಿಗೆ ಪ್ರತಿಯೊಂದರಲ್ಲೂ ಅಮೆರಿಕ, ಯೂರೋಪ್‌ಗಳೇ ಮಾದರಿಯೆನ್ನುವ ಬದಲು, ಭಾರತೀಯವೆನ್ನುವ, ನಮ್ಮ ಸಂಸ್ಕೃತಿಯ ಮೆರುಗಿನಲ್ಲೇ ಕಂಗೊಳಿಸುವ ಹೊಸ 'ಟ್ರೆಂಡ್'ಗಳನ್ನು ರಚಿಸಬಾರದೇಕೆ? ಆಧುನಿಕತೆಯೆಂದರೆ 'ಎಲ್ಲವನ್ನೂ ಬಿಡುವ' ಮನೋಧರ್ಮವಾಗಿರದೆ, 'ಎಲ್ಲವನ್ನೂ ಹಿಡಿದಿಟ್ಟುಕೊಳ್ಳುವ' ಪ್ರವೃತ್ತಿಯದಾಗಿರಬೇಕು. ಈ ರೀತಿಯ 'ಟ್ರೆಂಡ್' ರಚಿಸುವ ಕಾರ್ಯವನ್ನು ಸಮಾಜ ಮಾಡಬೇಕು.

ಶಿಕ್ಷಣಕ್ಷೇತ್ರವನ್ನೂ ಈ ಎರಡು ಪ್ರವೃತ್ತಿಗಳು ಪ್ರಭಾವಿಸುತ್ತದೆ. ಆಧುನಿಕ ಆವಿಷ್ಕಾರಗಳು ಶೈಕ್ಷಣಿಕ ವಿಧಾನವನ್ನು ಸದ್ದಿಲ್ಲದೆ ಪ್ರವೇಶಿಸುತ್ತದೆ; ಅದರೊಂದಿಗೆ ಬೆನ್ನುಬಿಡದ ಬೇತಾಳನಂತೆ ಅವುಗಳ ದುರುಪಯೋಗಗಳೂ ನಡೆಯುತ್ತಿವೆ. ಹೊಸ ಬದಲಾವಣೆಗಳನ್ನು ವಿದ್ಯಾಭ್ಯಾಸದಲ್ಲಿ ಅಳವಡಿಸಿಕೊಳ್ಳಲೇಬೇಕು ನಿಜ; ಆದರೆ ಅವುಗಳ ದುರುಪಯೋಗವಾಗದಂತೆ ತಡೆಯಲು ಶೈಕ್ಷಣಿಕ ಪದ್ಧತಿ ಹಾಗೂ ಸಂಸ್ಥೆಗಳು ಹೆಚ್ಚಿನ ಕಾಳಜಿ ವಹಿಸಬೇಕು. ನಿಯಮಗಳ ಮೂಲಕ ಅದನ್ನು ತಡೆಗಟ್ಟುವ ಬದಲು, ಮೊಬೈಲ್, ಇಂಟರ್‌ನೆಟ್ ಮುಂತಾದವುಗಳ ಸದ್ಬಳಕೆ ಮಾಡುವಲ್ಲಿ ಸೃಜನಾತ್ಮಕ ಪ್ರಯೋಗಶೀಲತೆ ಹೆಚ್ಚು ಕೆಲಸ ಮಾಡುತ್ತದೆ. ಜೀವನದಲ್ಲಿ ಕೆಡುಕು, ದುಷ್ಟ ಸ್ವಭಾವಗಳು ಹಿಂದೆಯೂ ಇದ್ದವು; ಇಂದೂ ಇವೆ. ಮುಂದೆಯೂ ಇರುತ್ತವೆ. ವಿದ್ಯಾಭ್ಯಾಸ, ಶಿಕ್ಷಣಕ್ರಮ ಸಮರ್ಥವಾಗಿದ್ದಷ್ಟೂ ಕೆಡುಕನ್ನು ನಿಯಂತ್ರಿಸಬಹುದು. ಧರ್ಮ, ಸಂಸ್ಕೃತಿ, ಆಧ್ಯಾತ್ಮ ಭಾವನೆಗಳು ವಿಜ್ಞಾನದೊಂದಿಗೆ ಮೇಳೈಸಿದಾಗ ಅದೆಂಥ ಶಕ್ತಿಶಾಲಿಯಾದ ಒಂದು 'ಟ್ರೆಂಡ್' ಆಗುವುದು ಗೊತ್ತೆ ? ಹಲವಾರು ಉತ್ತಮ ಶಾಲೆಗಳು ಇಂಥಾ ಆಶಯವನ್ನು ಸಮರ್ಥವಾಗಿ ಅಳವಡಿಸಿಕೊಂಡಿವೆ.

ಮಾನವನ ಜನಜೀವನ ಸದಾ ಹೊಸತನ್ನು ಕಾಣುವುದು, ಮುಂದುಮುಂದಕ್ಕೆ ಸಾಗುವುದು ಒಂದು ಸಹಜ ಪ್ರವೃತ್ತಿ. ಅದೇ ರೀತಿ ಶಾಶ್ವತವಾದ, ನಿತ್ಯವಾದ, ಹಾಗೂ ಸ್ಥಿರವಾದದ್ದನ್ನು ಕಂಡುಕೊಂಡು ಅದಕ್ಕೇ ಬದ್ಧವಾಗಿರುವುದು ಇನ್ನೊಂದು ಸಹಜ ಪ್ರವೃತ್ತಿ. ಇವೆರಡೂ ಪರಸ್ಪರ ವಿರುದ್ಧವಾಗದೆ, ಒಂದಕ್ಕೊಂದು ಪೂರಕವಾಗಿ ಸಾಗಬೇಕು. ಇದು ಅತ್ಯುತ್ತಮವಾದ ಜೀವನ ವಿಧಾನ. ಈ ಬಗೆಯ ಪ್ರವೃತ್ತಿಯನ್ನು ಅಳವಡಿಸಿಕೊಳ್ಳಲು ವ್ಯಕ್ತಿ-ವ್ಯಕ್ತಿಗಳು ಪ್ರಯತ್ನಿಸಬೇಕು. ವಿದ್ಯಾಸಂಸ್ಥೆ, ಧಾರ್ಮಿಕ ಸಂಸ್ಥೆಗಳು ಇದಕ್ಕೆ ಪ್ರಯತ್ನಿಸಬಹುದು. ಸ್ವಾಮಿ ವಿವೇಕಾನಂದರು ಹೇಳುವಂತೆ, 'ಒಳ್ಳೆಯವರಾಗುವುದು ಮತ್ತು ಒಳ್ಳೆಯವರನ್ನಾಗಿ ಮಾಡುವುದು — ಇದೇ ಧರ್ಮದ ಸಾರ'. ಎಲ್ಲರ ಜೀವನವೂ ಶಾಂತಿ, ನೆಮ್ಮದಿ, ಆನಂದದಿಂದ ತುಳುಕಾಡಬೇಕು. ಆಧುನಿಕತೆಯ ಗೊಂದಲದ ನಡುವೆ ನಾವೆಲ್ಲ ನೈತಿಕವಾಗಿ ಕಂಡುಕೊಳ್ಳಬೇಕಾದ, ಪ್ರಾಯೋಗಿಕವಾಗಿ ಅನುಸರಿಸಬೇಕಾದ ಮಾರ್ಗ ಇದಾಗಿರಬೇಕು. ❋

### ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೦ | ಭಾನುವಾರ | ಏಕಾದಶಿ |
| ೧೩ | ಬುಧವಾರ | ಗುರುಪೂರ್ಣಿಮೆ |
| ೨೪ | ಭಾನುವಾರ | ಏಕಾದಶಿ |
| ೨೬ | ಮಂಗಳವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |